**<u>ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 89/2023**

| | | | |
|---|---|---|---|
| **ಹೆಸರು** | **:** | **ಭಗವಂತರಾಯ** | **ಚಾ.ಸಾ. 2** |
| **ತಂದೆಯ ಹೆಸರು** | **:** | **ಭೀಮರಾಯ** | **ಪ್ರಾ.ಸಾ. 2** |
| **ವಯಸ್ಸು** | **:** | **34 ವರ್ಷ** | **ದಿನಾಂಕಃ 29-07-2024** |
| **ಉದ್ಯೋಗ** | **:** | **ಗ್ರೂಪ ಡಿ ನೌಕರ** | |
| **ವಾಸಸ್ಥಳ** | **:** | **ಹಳಿಹಾಳ ಅಫ್ಜಲಪುರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಪ್ರಾಸಾ. 1, ಚಾಸಾ3 ರಿಂದ 6 ರವರು ನನಗೆ ಗೊತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತಿಲ್ಲ. ಆರೋಪಿಗೆ ನಾನು ಈ ಮೊದಲು ನೋಡಿಲ್ಲ.

ಈಗ ನೋಡುತ್ತಿರುವ ನಿಪಿ-3 ಮತ್ತು 4 ರ ದಾಖಲೆಯಲ್ಲಿ ನನ್ನ ಸಹಿಗಳು ಇದೆ. ನನ್ನ ಸಹಿಗಳನ್ನು ನಿಪಿ-3(ಬಿ) ಮತ್ತು ನಿಪಿ-4(ಬಿ) ಎಂದು ಗುರುತಿಸಲಾಯಿತು.

ದಿನಾಂಕಃ 26-08-2022 ಬೆಳಿಗ್ಗೆ 5-30 ಗಂಟೆ ಸುಮಾರಿಗೆ ಚಿಂಚೋಳಿಯಲ್ಲಿರುವ ಬಸವೇಶ್ವರ ಸರ್ಕಲ ಹತ್ತಿರ ಬಂದಾಗ ಪ್ರಾಸಾ 1 ರವರು ಹಲಗೋಡ ಗ್ರಾಮಕ್ಕೆ ಹೋಗಿ ಬರೋಣ ಎಂದು ಹೇಳಿದ್ಕಕ್ಕೆ ಆಗ ನಾನು ಮತ್ತು ಚಾಸಾ-3 ರವರು ಪ್ರಾಸಾ. 1 ರವರ ಜೊತೆ ಹಲಕೋಡ ಗ್ರಾಮಕ್ಕೆ ಹೋಗಿರುತ್ತೇವೆ. ಹಲಕೋಡ ಗ್ರಾಮದಲ್ಲಿ ಮನೆಯ ಹತ್ತಿರ ಹೋದಾಗ ಮನೆ ಮುಂದೆ ಕುಳಿತಿರುವ 4 ರಿಂದ 5 ಜನರು ಜೀಪನ್ನು ನೋಡಿ ಓಡಿಹೋಗಿರುತ್ತಾರೆ. ಆಗ ಪ್ರಾಸಾ. 1 ರವರು ಮನೆ ಒಳಗೆ ಹೋಗಬೇಕೆಂದು ಹೇಳಿ ಒಂದು ಪಂಚನಾಮೆ ಬರೆದು ನನ್ನ ಸಹಿ ಪಡೆದಿರುತ್ತಾರೆ. ನಾನು ಚಾಸಾ-3 ರವರು ಮನೆ ಒಳಗೆ ಹೋಗಿರುವುದಿಲ್ಲ. ಆಗ ಪ್ರಾಸಾ 1 ಮತ್ತು ಅವರ ಸಿಬ್ಬಂದಿಯವರು ಮನೆಒಳಗೆ ಹೋಗಿ ಮನೆಯಿಂದ ಒಂದು ಕೊಡತೆಗೆದುಕೊಂಡು ಬಂದಿರುತ್ತಾರೆ. ಆಗ ಪ್ರಾಸಾ 1 ರವರು ಕೊಡದಲ್ಲಿರುವುದು ಸೇಂದಿ ಎಂದು ಹೇಳಿರುತ್ತಾರೆ. ಅದರ ಪ್ರಕಾರ ಪ್ರಾಸಾ. 1 ರವರು ಪಂಚನಾಮೆ ಬರೆದು ಸಹಿ ಮಾಡು ಎಂದು ಹೇಳಿದ್ದಕ್ಕೆ ಸಹಿ ಮಾಡಿದ್ದೇನೆ. ಸಾಯಂಕಾಲ 8-30 ರಿಂದ 9-00 ಗಂಟೆ ಸುಮಾರಿಗೆ ಸದರಿ ಪಂಚನಾಮೆಯನ್ನು ಬರೆದಿರುತ್ತಾರೆ. ನಂತರ ಸ್ಥಳದಲ್ಲಿ ಒಂದು ಬಾಟಲಿನಲ್ಲಿ ಪ್ರಾಸಾ 1 ರವರು ಸೇಂದಿಯನ್ನು ತುಂಬಿರುತ್ತಾರೆ. ಸದರಿ ಬಾಟಲಿಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ಮು.ಮಾ. 1 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಪಂಚನಾಮೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ-</u>**

ಪೆಂಟಯ್ಯ ರವರ ಮನೆಗೆ ಹೋಗೋಣ ಎಂದು ಪ್ರಾಸಾ 1 ರವರು ಕರೆದುಕೊಂಡು ಹೋದರು ಎಂದರೆ ಸರಿ. ಆಗ ನ್ಯಾಯಾಲಯದ ಮುಂದೆ ಇರುವ ಆರೋಪಿ ಮನೆಯಿಂದ ಓಡಿಹೋಗಿರುತ್ತಾನೆ ಎಂದರೆ ಸಾಕ್ಷಿ ನನಗೆ ಪೆಂಟಯ್ಯ ಯಾರು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ  ಪರವಾಗಿ ಶ್ರೀ ಜಿ.ಎ.ಹೆಚ್. ವಕೀಲರಿಂದಃ-</u>**

**ನಾನು ಹಾಗೂ** ಚಾಸಾ-3 ರವರು ಸರಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತೇವೆ ಎಂದರೆ ಸರಿ. ನಾನು ಈ ಪ್ರಕರಣ ಬಿಟ್ಟು ಬೇರೆ ಯಾವುದೇ ಪ್ರಕರಣದಲ್ಲಿ ಪಂಚರಾಗಿ ಸಾಕ್ಷಿ ಹೇಳಿಲ್ಲ. ಪ್ರಾಸಾ 1 ರವರು ಪಂಚರಾಗಲು ನನಗೆ ಹೇಳಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ಪ್ರಾಸಾ 1 ರವರ ಜೊತೆ ಹೋದಾಗ ಪಂಚನಾಮೆಯಲ್ಲಿ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ಜಪ್ತಿ ಪಂಚನಾಮೆಯ ಸಂಗತಿಗಳನು ಪ್ರಾಸಾ 1 ರವರು ನನಗೆ ಓದಿ ಹೇಳಿದ್ದಾರೆ. ಪ್ರಾಸಾ 1 ರವರ ಮಾತುಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಹೋಗಿದ್ದ ಮನೆಯ ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ಪ್ರಾಸಾ. 1 ರವರು ಅಂಕಿ ಸಂಖ್ಯೆ ಗೋಸ್ಕರ ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದಾರೆ ಅದರಲ್ಲಿ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಿಂಚೋಳಿಯಿಂದ ಹಲಕೋಡ ಗ್ರಾಮ 30-35 ಕಿ.ಮಿ. ದೂರ ಅಂತರದಲ್ಲಿ ಇದೆ. ಚಿಂಚೋಳಿಯಿದ ಹಲಕೋಡ ಗ್ರಾಮಕ್ಕೆ ಹೋಗಲು ಅಂದಾಜು 1 ಗಂಟೆ ಬೇಕಾಗುತ್ತದೆ. ನಾನು ಹಲಕೋಡ ಗ್ರಾಮಕ್ಕೆ ಹೋಗದೇ, ಚಂದಾಪುರ ಮತ್ತು ಚಿಂಚೋಳಿ  ಮದ್ಯದಲ್ಲಿರುವ ಅಬಕಾರಿ ಕಚೆರಿಯಲ್ಲಿ ನನಗೆ ಕರೆದುಕೊಂಡು ಹೋಗಿ ಸಹಿ ಪಡೆದು ಮತ್ತು ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನ ಎಂದರೆ ಸರಿಯಲ್ಲ. ಮನೆಯ ಒಳಗೆ ಏನು ಇದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಅಬಕಾರಿ ಅಧಿಕಾರಿಗಳ ಮಾತುಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**